ದಿನಾಂಕ 26-06-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 1 ರಿಂದ 9 ನೇ ಪ್ರತಿವಾದಿಯರ ಪರ ಶ್ರೀ ಎ.ಟಿ.ಬಿ ವಕೀಲರಿಂದ.**

ನಾನು ವಿದ್ಯಾಭ್ಯಾಸ ಮಾಡಿಲ್ಲ ಮತ್ತು ಸಹಿ ಮಾಡುವುದಿಲ್ಲ ಕೇವಲ ಹೆಬ್ಬೆಟ್ಟಿನ ಸಹಿ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಆಂಗ್ಲ ಭಾಷೆಯಲ್ಲಿ ಇರುತ್ತದೆ. ನನಗೆ ಆಂಗ್ಲ ಭಾಷೆ ಗೊತ್ತಾಗುವುದಿಲ್ಲ. ಆದಕಾರಣ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು ಹಾಗೂ ನನ್ನ ಮಗಳು ಮಾಡಿರುತ್ತೇವೆ. ನನ್ನ ಮಗಳ ಹೆಸರು ಲಿಂಗಮ್ಮ ಆಗಿರುತ್ತದೆ. ನನ್ನ ಮಗಳಿಗೆ ಶಿವಲಿಂಗಮ್ಮ ಹಾಗೂ ಸಿದ್ದಲಿಂಗಮ್ಮ ಎಂತಲೂ ಕರೆಯುತ್ತಾರೆ. ಆಸ್ತಿ ಬೇಕು ಎಂದು ಈ ದಾವೆ ಹೂಡಿರುತ್ತೇವೆ. ನನ್ನ ಸ್ವಂತ ಊರು ಕೊತ್ತದೊಡ್ಡಿ ಆಗಿರುತ್ತದೆ. ನನ್ನ ತಂದೆ-ತಾಯಿ ತೀರಿಕೊಂಡಿರುತ್ತಾರೆ. ನನ್ನ ತಂದೆ-ತಾಯಿ ತೀರಿಕೊಂಡು 50 ವರ್ಷಕ್ಕಿಂತ ಮೇಲ್ಪಟ್ಟು ಆಗಿರುತ್ತದೆ. ನಾನು ಚಿಕ್ಕವಳಿದ್ದಾಗ ನನ್ನ ತಂದೆ-ತಾಯಿ ತೀರಿಕೊಂಡಿದ್ದು ನನಗೆ ನನ್ನ ತಂದೆಯ ನೆನಪು ಇದೆ ಆದರೆ ತಾಯಿಯ ನೆನಪು ಇರುವುದಿಲ್ಲ. ನನ್ನ ತಂದೆಗೆ 05 ಜನ ಹೆಣ್ಣು ಮಕ್ಕಳು ಮತ್ತು 02 ಜನ ಗಂಡು ಮಕ್ಕಳು ಇರುತ್ತಾರೆ. ನನ್ನ ತಂದೆ-ತಾಯಿಯ ಮಕ್ಕಳಲ್ಲಿ ನಾನು ಕೊನೆಯವಳು ಆಗಿರುತ್ತೇನೆ. ನನ್ನ ಸಹೋದರ-ಸಹೋದರಿಯರ ಮದುವೆ ಆಗಿರುತ್ತದೆ. ನನ್ನ ಸಹೋದರಿಯರನ್ನು ಕೊತ್ತದೊಡ್ಡಿ ಊರಿನವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ನನ್ನ ಸಹೋದರಿಯರು ತಮ್ಮ ತಮ್ಮ ಗಂಡಂದಿರ ಮನೆಯಲ್ಲಿ ಇರುತ್ತಿದ್ದು ನಾನು ಮಾತ್ರ ನನ್ನ ತವರು ಮನೆಯಲ್ಲಿ ಇರುತ್ತಿದ್ದೇನೆ. ನಾನು 4-5 ವರ್ಷಗಳಿಂದ ನನ್ನ ತವರು ಮನೆಯಲ್ಲಿ ಇರುತ್ತಿದ್ದೇನೆ. ನಾನು 40-42 ವರ್ಷಗಳಿಂದ ನನ್ನ ತವರು ಮನೆಯಲ್ಲಿ ಇರುತ್ತಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 9 ನೇ ಪ್ರತಿವಾದಿಗಳು ಯಾರು ಮತ್ತು ಅವರ ಹೆಸರು ಏನು ನೆನಪಿಲ್ಲ. ನನ್ನ ಅಣ್ಣನ ಮಕ್ಕಳು ಮತ್ತು ಅಣ್ಣನಿಂದ ವಾದ ಪತ್ರದಲ್ಲಿ ತೋರಿಸಿದ 1 ನೇ ಪ್ರತಿವಾದಿಯ ವಂಶಾವಳಿ ನನಗೆ ಗೊತ್ತಾಗಿರುತ್ತದೆ. ನನಗೆ 1 ನೇ ಪ್ರತಿವಾದಿಯ ವಂಶಾವಳಿಯ ಬಗ್ಗೆ ಗೊತ್ತಿರುವುದಿಲ್ಲ ನನ್ನ ಅಣ್ಣ ಹಾಗೂ ಅಣ್ಣನ ಮಕ್ಕಳು ಹೇಳಿದ್ದರ ಮೇರೆಗೆ ನಾನು ವಂಶಾವಳಿಯನ್ನು ವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ನಿಜ. ಈ ಮೊದಲು ನಾನು ಒಂದು ಅರ್ಜಿಯನ್ನು ಸಲ್ಲಿಸಿ ಅದರ ಜೊತೆ ದಾಖಲಾತಿಗಳನ್ನು ಸಲ್ಲಿಸಿದ್ದೆ ಎಂದರೆ ನಿಜ. ಆ ದಾಖಲೆಗಳು ನನಗೆ ಹಾಗೂ ನನ್ನ ಗಂಡನಿಗೆ ಸಂಬಂಧಪಟ್ಟ ದಾಖಲೆಗಳು ಆಗಿರುತ್ತವೆ. 1 ನೇ ಪ್ರತಿವಾದಿ ನನ್ನ ಗಂಡ ಅಲ್ಲ ನನಗೂ 1 ನೇ ಪ್ರತಿವಾದಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಪಿ-44 ರಿಂದ ನಿಪಿ-49 ನ್ನು ನನ್ನ ಅಣ್ಣನ ಮಕ್ಕಳು ತೆಗೆಸಿಕೊಟ್ಟಿರುತ್ತಾರೆ. ನಿಪಿ-44 ರಿಂದ 49 ನ್ನು ಯಾವ ದಿನಾಂಕ, ತಿಂಗಳು ಹಾಗೂ ವರ್ಷ ನನಗೆ ತೆಗೆಸಿಕೊಟ್ಟಿರುತ್ತಾರೆ ನನಗೆ ಗೊತ್ತಿಲ್ಲ. ನಿಪಿ-44 ರಿಂದ 49 ನ್ನು ನನಗೆ ನನ್ನ ಅಣ್ಣ

ಕೊಟ್ಟಿರುತ್ತಾರೆ. ನಿಪಿ-44 ರಿಂದ 49 ನ್ನು ನನಗೆ ನನ್ನ ಅಣ್ಣ 60 ವರ್ಷಗಳ ಹಿಂದೆ ಕೊಟ್ಟಿರುತ್ತಾರೆ. ನಿಪಿ-44 ರಿಂದ 49 ರ ದಾಖಲೆಗಳು ಇಷ್ಟು ದಿನ ನ್ಯಾಯಾಲಯದಲ್ಲಿ ಇದ್ದವು. ನಿಡಿ-44 ರಿಂದ 49 ನ್ನು 60 ವರ್ಷಗಳ ಹಿಂದೆ ನನಗೆ ಕೊಟ್ಟಿದ್ದಾದರೆ ಆಗ ನಾನು ಜನಿಸಿರಲಿಲ್ಲ ಎಂದರೆ ಅದು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿಗಳು ಹೊಲಗಳು ಇರುತ್ತವೆ. ಈ ದಾವೆಯನ್ನು ಜಮೀನುಗಳನ್ನು ಹೊರತುಪಡಿಸಿ ಮಹಿಂದ್ರಾ ವಾಹನದ ಮೇಲೆ ಹೂಡಿರುತ್ತೇವೆ. ಈ ದಾವೆಯನ್ನು ಮಹಿಂದ್ರಾ ಟ್ರ್ಯಾಕ್ಟರನ ಮೇಲೆ ಹೂಡಲಾಗಿದೆ. ಮಹಿಂದ್ರಾ ಟ್ರ್ಯಾಕ್ಟರನ ನಂಬರ ಹಾಗೂ ಬಣ್ಣ ಗೊತ್ತಿಲ್ಲ. ಮಹಿಂದ್ರಾ ಟ್ರ್ಯಾಕ್ಟರನ ಮಾಲೀಕರು 1 ನೇ ಪ್ರತಿವಾದಿ ಆಗಿರುತ್ತಾರೆ. ಟ್ರ್ಯಾಕ್ಟರ್ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಈ ದಾವೆಯನ್ನು ಎಷ್ಟು ಆಸ್ತಿಗಳ ಮೇಲೆ ಹೂಡಿರುತ್ತೇನೆ ಮತ್ತು ಅವುಗಳ ಸರ್ವೆ ನಂಬರಗಳು ಗೊತ್ತಿಲ್ಲ. ನಾನು ದಾವಾ ಆಸ್ತಿಗಳ ಪಹಣಿಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿ ಗೋವಿನದೊಡ್ಡಿಯಲ್ಲಿ 40 ಎಕರೆ ಇರುತ್ತದೆ. ಗೋವಿನದೊಡ್ಡಿ ಸೀಮಾಂತರದಲ್ಲಿರುವ 40 ಎಕರೆ ಜಮೀನು ಎಷ್ಟು ಸರ್ವೆ ನಂಬರಗಳನ್ನು ಹೊಂದಿರುತ್ತದೆ ಗೊತ್ತಿಲ್ಲ. ಗೋವಿನದೊಡ್ಡಿಯ 40 ಎಕರೆ ಜಮೀನಿಗೆ ಮೂಲ ಮಾಲೀಕರು 1 ನೇ ಪ್ರತಿವಾದಿ ಆಗಿರುತ್ತಾರೆ. ಗೋವಿನದೊಡ್ಡಿಯ 40 ಎಕರೆ ಜಮೀನು 1 ನೇ ಪ್ರತಿವಾದಿಯ ಹೆಸರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. 40 ಎಕರೆ ಜಮೀನನ್ನು 1 ನೇ ಪ್ರತಿವಾದಿ ತಮ್ಮ ಹಿರಿಯರು ಮಾಡಿದ ಜಮೀನುಗಳ ಆದಾಯದಿಂದ ಖರೀದಿ ಮಾಡಿರುತ್ತಾರೆ. ಹಿರಿಯರ ಆಸ್ತಿಗಳು ನನ್ನ ಮನೆತನಕ್ಕೆ ಹೇಗೆ ಬಂದಿರುತ್ತದೆ ಎಂದರೆ ಮಗ ಎಂದ ಮೇಲೆ ಬಂದಿರುತ್ತದೆ ಎಂದು ಹೇಳುತ್ತಾರೆ. 40 ಎಕರೆ ಜಮೀನು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ ಬದಲಿಗೆ ಅದು ಅವರ ಸ್ವಂತ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲೀಗಾಗಿ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.